**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ129/2022</u> ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **25.01.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ **ಬಿ.ಎಂ.ಎಸ್** ವಕೀಲರಿಂದಃ</u>

ನನಗೆ ಈ ದಾವೆಯ ಬಗ್ಗೆ ಎಲ್ಲಾ ಮಾಹಿತಿ ತಿಳಿದಿರುತ್ತದೆ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳ ಬಗ್ಗೆ ನಾನು ಓದಿ ತಿಳಿದುಕೊಂಡಿರುತ್ತೇನೆ.

ವಾದಿಯು ಇದೇ ನ್ಯಾಯಾಲಯದಲ್ಲಿ **O.S No.**87/2013 ರಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ವಾದಿಯೇ ಹಾಜರಾಗಿ ದಾವೆಯನ್ನು ನಡೆಸುತ್ತಿದ್ದಾರೆ ಎಂದರೆ ಸರಿ. ಸದರಿ ದಾವೆಯು ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ. ಈ ದಾವೆಯ ಪಕ್ಷಗಾರರ ಮೂಲ ವಂಶಸ್ಥರ ಮಾಹಿತಿ ನನಗೆ ಇರುತ್ತದೆ.

ದೊಡ್ಡನೀಲೆಗೌಡ ಹಾಗೂ ಚಿಕ್ಕನೀಲೆಗೌಡರವರು ನನ್ನ ತಾಯಿಯ ತಾತ ಆಗಿರುತ್ತಾರೆ. ಚಿಕ್ಕನೀಲೆಗೌಡರವರಿಗೆ ಮೂರು ಜನ ಮಕ್ಕಳು ಎಂದರೆ ಸರಿಯಲ್ಲ. ದೊಡ್ಡನೀಲೆಗೌಡರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ನನ್ನ ತಾಯಿಯ ತಂದೆಯ ಹೆಸರು ಚಿಕ್ಕನೀಲೆಗೌಡ ಅಲಿಯಾಸ್ ಪುಳಚಪ್ಪ ಎಂದು ಇರುತ್ತದೆ. ಸದರಿ ಪುಳಚಪ್ಪರವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಚಿಕ್ಕನೀಲೆಗೌಡ ಅಲಿಯಾಸ್ ಪುಳಚಪ್ಪರವರ ತಂದೆಯ ಹೆಸರು ಚಿಕ್ಕನೀಲೆಗೌಡ ಆಗಿದ್ದು, ದೊಡ್ಡನೀಲೆಗೌಡರವರಿಗೆ ಮಕ್ಕಳು ಇಲ್ಲದ ಕಾರಣ ಸದರಿಯವರು ದೊಡ್ಡನೀಲೆಗೌಡರವರಿಗೆ ದತ್ತು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಪುಳಚಪ್ಪರವರಿಗೆ ಇಬ್ಬರು ಗಂಡು ಹಾಗೂ 5 ಜನ ಹೆಣ್ಣು ಮಕ್ಕಳು ಇರುತ್ತಾರೆ. ಸದರಿಯವರ ಹೆಸರು ಗೌಡಪ್ಪ, ಚಿಕ್ಕನೀಲೆಗೌಡ ಅಲಿಯಾಸ್ ಪಾಪಣ್ಣ, ಲಕ್ಷ್ಮಮ್ಮ, ಸಾವಿತ್ರಮ್ಮ, ದೊಡ್ಡತಾಯಮ್ಮ, ಜಯಮ್ಮ ಮತ್ತು ಮತ್ತೊಬ್ಬರ ಹೆಸರು ನನಗೆ ನೆನಪಿರುವುದಿಲ್ಲ. ಮತ್ತೊಬ್ಬರ ಹೆಸರು ಸಣ್ಣಮ್ಮ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾವಿತ್ರಮ್ಮರವರನ್ನು ಹೊರತುಪಡಿಸಿ ಪುಳಚಪ್ಪರವರ ಎಲ್ಲಾ ಮಕ್ಕಳು ತೀರಿಕೊಂಡಿರುತ್ತಾರೆ ಎಂದರೆ ಸರಿ. ನಾನು ಜಯಮ್ಮರವರ ಮಗ ಎಂದರೆ ಸರಿ.

ವಾದಿಯ ತಂದೆಯ ಹೆಸರು ನೀಲೆಗೌಡ ಅಲಿಯಾಸ್ ಪಾಪಣ್ಣ ಎಂದರೆ ಸಾಕ್ಷಿಯು ಸದರಿಯವರು ಸಾಕು ತಂದೆಯಾಗಿರುತ್ತಾರೆ ಎಂದು ನುಡಿಯುತ್ತಾರೆ. 1941 ರಲ್ಲಿ ಸರ್ವೇ ನಂ.91/2 ರಲ್ಲಿ 14 ½ ಗುಂಟೆ ಜಮೀನನ್ನು ಪುಳಚಪ್ಪರವರು ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯಲ್ಲಿ ಬೆಲ್ಲ ಮಾಡುವ ಕ್ರಶರ್ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಹಲ್ಲರ್ ಮತ್ತು ಹಿಟ್ಟಿನ ಗಿರಿಣಿ ಇತ್ತು ಎಂದರೆ ಸರಿ. ಸದರಿ ಆಸ್ತಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಪುಳಚಪ್ಪರವರ ಎಲ್ಲಾ ಮಕ್ಕಳಿಗೂ ಹಕ್ಕು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯು ಗಾಣಿಗರಕೊಪ್ಪಲು ಗ್ರಾಮದ ವ್ಯಾಪ್ತಿಯಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ಕಂಚಿನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪಾಪಣ್ಣರವರು ಚಿಕ್ಕನೀಲೇಗೌಡ ಅಲಿಯಾಸ್ ತಮ್ಮಯ್ಯರವರ ಮಗಳು ಜಯಮ್ಮರವರಿಗೆ ನೀಡಿರುವ ಕಟ್ಟಡ ಕಟ್ಟುವ ಪರವಾನಿಗೆಯನ್ನು ರದ್ದುಗೊಳಿಸುವಂತೆ 1981 ರಲ್ಲಿ ಉಪನೋಂದಣಾಧಿಕಾರಿಗೆ ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ಶ್ರೀ **ಬಿ.ಎಂ.ಎಸ್** ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**